

# ಸೂಪರ್ ಹೀರೋಯಿನ್ ಅಮಲಾ

ದಕ್ಷಿಣ ಭಾರತದಲ್ಲಿ ಹೀರೋ ಯಾವತ್ತಿದ್ದರೂ ಸೂಪರ್‌ಮ್ಯಾನ್. ಹೀರೋಯಿನ್‌ಗಳು ಕೇವಲ ಗೊಂಬೆಯಂತೆ ಕುಣಿಯೋದಕ್ಕೆ ಮಾತ್ರ. ಸಂಭಾವನೆಯ ವಿಷಯದಲ್ಲೂ ಹಾಗೆಯೇ. ಹೀರೋ ಒಂದು ಕೋಟಿ ರೂಪಾಯಿ ಸಂಭಾವನೆ ಪಡೆಯುವ ಚಿತ್ರದಲ್ಲೂ ಹೀರೋಯಿನ್‌ಗೆ ಹೆಚ್ಚೆಂದರೆ 10–15 ಲಕ್ಷ ಅಷ್ಟೆ! ಹೀರೋಯಿನ್ ಏನಿದ್ದರೂ ಎರಡನೆ ದರ್ಜೆಯ ಪ್ರಜೆ. ಕನ್ನಡ, ತಮಿಳು, ತೆಲುಗು, ಮಲಯಾಳಂ ಎಲ್ಲೆಡೆಯೂ ಇದೇ ಸ್ಥಿತಿ. ಬಿಗ್‌ಬಜೆಟ್ ತೆಲುಗು, ತಮಿಳಿನಲ್ಲಿ ಕೆಲವು ಹೀರೋಯಿನ್‌ಗಳು 50–60 ಲಕ್ಷದವರೆಗೆ ಸಂಭಾವನೆ ಪಡೆದದ್ದೂ ಇದೆ.

ಆದರೆ ಇತ್ತೀಚೆಗೆ ಕಾಲ ಬದಲಾಗಿದೆಯೆ? ಕೆಲವು ಹೀರೋಯಿನ್‌ಗಳ ಮೇಲೆ ನಿರ್ಮಾಪಕರು ಕೋಟಿಗಟ್ಟಳೆ ಸುರಿಯಲು ತಯಾರಾಗಿದ್ದಾರೆಯೆ? ಹೌದು ಎನ್ನುತ್ತವೆ ಮೂಲಗಳು. ಹಿಂದಿಯಿಂದ ಐಶ್ವರ್ಯ ರೈಯನ್ನೋ, ಪ್ರಿಯಾಂಕಾ ಚೋಪ್ರಾಳನ್ನೋ ಕರೆ ತಂದಾಗ ತಮಿಳು ಚಿತ್ರರಂಗ ಕೈಯೆತ್ತಿ ಕೋಟಿಯ ಲೆಕ್ಕದಲ್ಲಿ ಕೊಟ್ಟದ್ದಿದೆ. ಆದರೆ ಅದು ಅವರು ಹಿಂದಿಯಲ್ಲಿ ಭದ್ರವಾಗಿದ್ದರಿಂದ ನೀಡುವ ಮೊತ್ತ. ಈ ಎಲ್ಲ ನಿಯಮಗಳನ್ನೂ ಮೀರಿ ಇದೀಗ ಒಬ್ಬ ಹೀರೋಯಿನ್ ತಮಿಳು ಚಿತ್ರರಂಗದಲ್ಲಿ ಸಂಚಲನ ಮೂಡಿಸಿದ್ದಾಳೆ. ಆಕೆಯ ಹೆಸರು ಅಮಲಾ ಪೌಲ್. ಸದ್ಯಕ್ಕೆ ತಮಿಳು ಚಿತ್ರರಂಗದ ಕಣ್ಮಣಿಯೀಕೆ. ಈಕೆ ನಿರ್ಮಾಪಕರ ಮೇಲೆ ಎಷ್ಟು ಗಾಢ ಪರಿಣಾಮ ಬೀರಿದ್ದಾಳೆಂದರೆ ಹೊಸ ಚಿತ್ರವೊಂದಕ್ಕೆ ಈಕೆ ವಿಧಿಸುತ್ತಿರುವ ಸಂಭಾವನೆಯ ಮೊತ್ತ ನಾಲ್ಕು ಕೋಟಿ ರೂಪಾಯಿ! ಎಷ್ಟೋ ಹೀರೋಗಳಿಗೆ ಅದರ ಕಾಲು ಭಾಗದಷ್ಟೂ ಸಂಭಾವನೆ ಸಿಗೋದಿಲ್ಲ! ಚಿತ್ರರಂಗಕ್ಕೆ ಬಂದು ಕೇವಲ ಎರಡೇ ವರ್ಷದಲ್ಲಿ ಈಕೆ ಈ ಮಟ್ಟಕ್ಕೆ ಬೆಳೆದಿರುವುದು ಅಚ್ಚರಿಯ ಸಂಗತಿಯೇ.

ಅಮಲಾ ತಮಿಳು ಚಿತ್ರರಂಗದಲ್ಲಿ ತನ್ನ ಇನಿಂಗ್ಸ್ ಆರಂಭಿಸಿದ್ದು 'ಸಿಂಧು ಸಮವೆಲಿ' ಎಂಬ ಚಿತ್ರದ ಮೂಲಕ. ವಿವಾದಾತ್ಮಕ ವಿಷಯಗಳನ್ನು ಇಟ್ಟುಕೊಂಡು ಚಿತ್ರ ಮಾಡುವ ಸಾಮಿ ಬರೆದ ಕಥೆಯ ಆ ಚಿತ್ರ ಅಷ್ಟೇನೂ ಯಶಸ್ಸು ಕಾಣಲಿಲ್ಲ. ತನ್ನ ಮಾಮನ ಜತೆಗೇ ದೈಹಿಕ ಸಂಬಂಧ ಬೆಳೆಸುವ ಸೊಸೆಯ ಪಾತ್ರವದು.

ಆದರೆ ಪ್ರಭು ಸೊಲೊಮನ್ ನಿರ್ದೇಶನದ 'ಮೈನಾ' ಎಂಬ ಚಿತ್ರ ಈಕೆಯ ಅದೃಷ್ಟದ ದಿಡ್ಡಿ ಬಾಗಿಲನ್ನೇ ತೆರೆಯಿತು. ವಿಕ್ರಂ ಮತ್ತು ಅನೂಷ್ಕಾ ನಟಿಸಿದ ಸೂಪರ್‌ಹಿಟ್ ಆದ 'ದೈವತಿರುಮಗಳ್' ಚಿತ್ರದಲ್ಲಿ ಸಣ್ಣದೊಂದು ಪಾತ್ರ ನಿರ್ವಹಿಸಿದ ಈಕೆ ತನ್ನ ಅತ್ಯುತ್ತಮ ಅಭಿನಯದಿಂದ ಅನೂಷ್ಕಾಳನ್ನೂ ಹಿಂದಿಕ್ಕಿ ವಿಮರ್ಶಕರ ಭಾರೀ ಪ್ರಶಂಸೆಗೆ ಪಾತ್ರಳಾದಳು. ಈಗ ಬಂದಿರುವ ವೇಟ್ಟೈ ಚಿತ್ರದಲ್ಲಿ ಕಮರ್ಷಿಯಲ್ ಲುಕ್‌ನಲ್ಲಿ ಕಾಣಿಸಿಕೊಂಡು ಅದ್ಭುತ ಗಳಿಕೆಗೂ ಕಾರಣಳಾಗಿದ್ದಾಳೆ.

ತೆಲುಗಿನಲ್ಲೂ ಈಕೆ ಈಗ ಸೂಪರ್ ಹೀರೋಯಿನ್. ಆರಂಭದಲ್ಲಿ 'ಬೆಜವಾಡ' ಎಂಬ ಸಿನಿಮಾ ಫ್ಲಾಪ್ ಆದರೂ, ಆ ಬಳಿಕ ತಮಿಳಿನಿಂದ ತೆಲುಗಿಗೆ ಡಬ್ ಆದ ಈಕೆಯ ಎಲ್ಲ ಚಿತ್ರಗಳೂ ಗಳಿಕೆಯಲ್ಲಿ ಯಶಸ್ಸು ಕಂಡಿವೆ. ಮೈನಾದ ರಿಮೇಕ್ ಪ್ರೇಮಕ್ಕೈದಿ, ಸಿಂಧು ಸಮವೆಲಿ, ಲವ್ ಫೈಲ್ಯೂರ್ ಎಲ್ಲವೂ ಪ್ರೇಕ್ಷಕರ ಮೆಚ್ಚುಗೆ ಮತ್ತು ದುಡ್ಡು ಎರಡನ್ನೂ ಗಳಿಸಿದವು. ಈಗ ತೆಲುಗಿನ ಸೂಪರ್‌ಸ್ಟಾರ್ ರಾಮ್‌ಚರಣ್ ತೇಜಾ ಜತೆಗೆ ಹೊಸ ಚಿತ್ರಕ್ಕೆ ಸಹಿ ಹಾಕಿದ್ದಾಳೆ. ಮಲಯಾಳಂನ ಖ್ಯಾತ ನಿರ್ದೇಶಕ ಲಾಲ್ ಜೋಸ್ ಜತೆಗೆ 'ಡೈಮಂಡ್ ನೆಕ್ಲೆಸ್' ಎಂಬ ಚಿತ್ರದಲ್ಲಿ ನಟಿಸುತ್ತಿದ್ದಾಳೆ.

ತಮಿಳಿನಲ್ಲಿ ಈಕೆಯ ಖ್ಯಾತಿ ಎಷ್ಟು ಹಬ್ಬಿದೆಯೆಂದರೆ, 'ವಿಗಡಕವಿ' ಎಂಬ ಲೋ ಬಜೆಟ್ ಚಿತ್ರದ ಪ್ರಚಾರದಲ್ಲಿ ನಿರ್ಮಾಪಕರು 'ಇದು ಅಮಲಾ ಪೌಲ್ ಚಿತ್ರ' ಎಂದೇ ಪೋಸ್ಟರ್ ಅಂಟಿಸಿ ಪ್ರಚಾರ ಮಾಡಿದ್ದಾರೆ. ಮಾಡೆಲಿಂಗ್‌ನಲ್ಲಿ ಹೆಸರು ಮಾಡಿ ಚಿತ್ರರಂಗ ಪ್ರವೇಶಿಸಿರುವ ಈಕೆಗೆ ಡಿಗ್ರಿ ಮುಗಿಸುವ ಕನಸಂತೆ. ಹಾಗೆಯೇ ಮಣಿರತ್ನಂ, ಶಂಕರ್, ಮುರುಗಾದಾಸ್ ಮುಂತಾದ ಖ್ಯಾತ ನಾಮ ನಿರ್ದೇಶಕರ ಚಿತ್ರಗಳಲ್ಲಿ ನಟಿಸುವ ಆಸೆ ಇದೆಯಂತೆ!

■ ಬಿಂದು

